# <u>ಕರ್ನಾಟಕ ಲೋಕಾಯುಕ್ತ</u>

**ಸಂ.ಕಂಪ್ಲೇಂಟ್/ಉಪಲೋಕ್/ಎಂ.ವೈ.ಎಸ್./2617/2022**
**ಪಿ.ಓ.ಎ.ಆರ್.ಇ–06 (ಮಂಡನಾಧಿಕಾರಿಗಳ ಶಾಖೆ).**

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು ದಿನಾಂಕ: 14/11/2022.

23

## <u>ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸ್ಸು ವರದಿ</u>

**<u>ವಿಷಯ:</u> ಶ್ರೀ. ಕರುಣಾಕರ್ ಬಿನ್ ಲೇಟ್ ನಾಗರಾಜೇಗೌಡ, ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಟಿ.ನರಸೀಪುರ, ವೈಸೂರು ಜಿಲ್ಲೆರವರು ಸರ್ಕಾರಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ ಕರ್ತವ್ಯಲೋಪ ತೋರಿದ ಬಗ್ಗೆ.**

****

ಕರ್ನಾಟಕ ಲೋಕಾಯುಕ್ತ ಮೈಸೂರು ಪೊಲೀಸ್ ಠಾಣೆಯ ಪೊಲೀಸ್ ಉಪಾಧೀಕ್ಷಕರು (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ ಶ್ರೀ. **ಕರುಣಾಕರ್ ಬಿನ್ ಲೇಟ್ ನಾಗರಾಜೇಗೌಡ, ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಟಿ.ನರಸೀಪುರ, ವೈಸೂರು ಜಿಲ್ಲೆ** (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ). ಇವರ ವಿರುದ್ಧ ಶ್ರೀ. **ಕ್ಯಾತೇಗೌಡ, ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ಚಾಮರಾಜನಗರ** ರವರು (ಇನ್ನು ಮುಂದೆ **'ದೂರುದಾರರು'** ಎಂದು ಕರೆಯಲ್ಪಡುತ್ತಾರೆ) ಇವರಿಗೆ ಬಂದ ಮಾಹಿತಿಯ ಮೇರೆಗೆ ಗೌಪ್ಯ ಮಾಹಿತಿಯನ್ನು ಸಂಗ್ರಹಿಸಿ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮೈಸೂರು ವಿಭಾಗ, ಮೈಸೂರುರವರಿಗೆ ಗೌಪ್ಯ ವರದಿಯನ್ನು ಸಲ್ಲಿಸಿದ್ದು, ವರದಿಯನ್ನು ಪರಿಶೀಲಿಸಿ, ಪ್ರಕರಣ ದಾಖಲು ಮಾಡಿಕೊಂಡು ತನಿಖೆ ಕೈಗೊಳ್ಳುವ ಬಗ್ಗೆ ಶ್ರೀ. ಗೋಪಿಕೃಷ್ಣ ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ ಚಾಮರಾಜನಗರ ಪೊಲೀಸ್ ಠಾಣೆರವರಿಗೆ ಆದೇಶಿಸಿದ್ದು, ದೂರುದಾರರು ನೀಡಿದ ಗೌಪ್ಯ ಮಾಹಿತಿಯನ್ನು ಆಧರಿಸಿ, ಎದುರುದಾರರ ವಿರುದ್ಧ ಗುನ್ನೆ ನಂ.03/2015 ಕಲಂ 13(1)(ಇ) ಪಿ.ಸಿ. ಕಾಯ್ದೆ 1988ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ. ಎದುರುದಾರರು ಅವರ ಬಲ್ಲ ಮೂಲಗಳ ಆದಾಯಕ್ಕಿಂತ ಹೆಚ್ಚಿನ ಆಸ್ತಿಯನ್ನು ಹೊಂದಿರುತ್ತಾರೆಂದು ತನಿಖಾಧಿಕಾರಿಗಳು ವರದಿ ಸಲ್ಲಿಸಿದ ಮೇರೆಗೆ ದಾಖಲಾತಿಗಳನ್ನು ಪರಿಶೀಲಿಸಿದಾಗ ಎದುರುದಾರರು ಅವರ **ಸೇವಾ ಅವಧಿಯಲ್ಲಿ ಸ್ಥಿರಾಸ್ತಿಗಳನ್ನು ಖರೀದಿಸಿದ ಮತ್ತು ಮಾರಾಟ ಮಾಡಿದ ಬಗ್ಗೆ ಪೂರ್ವಾನುಮತಿಯನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದಿರುವುದಿಲ್ಲ. ಆ ಕಾರಣ, ಎದುರುದಾರರು ಕ.ನಾ.ಸೇ. (ನಡತೆ) ನಿಯಮಗಳನ್ನು ಪಾಲಿಸದೆ ಕರ್ತವ್ಯಲೋಪ / ದುರ್ನಡತೆ**

**ತೋರಿಸಿರುವುದು** ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2)ರಡಿಯಲ್ಲಿ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿರುತ್ತದೆ.

2. **ಪ್ರಕರಣದ ಸಂಕ್ಷಿಪ್ತ ಸಾರಾಂಶ:-**

i) ದೂರುದಾರರಾದ ಶ್ರೀ. **ಕ್ಯಾತೇಗೌಡ,** ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಾಮರಾಜನಗರರವರು ನೀಡಿದ ಗೌಪ್ಯ ಮಾಹಿತಿಯ ಆಧಾರದ ಮೇಲೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮೈಸೂರು ವಿಭಾಗ, ಮೈಸೂರುರವರು ದಿ: 25/02/2015ರಂದು ನೀಡಿದ ಜ್ಞಾಪನ ಸಂ: ಕೆ.ಎಲ್.ಎ. / ಪಿ.ಡಬ್ಲ್ಯೂ / ಎಸ್.ಪಿ. / ಎಂ.ವೈ. / ಸೋರ್ಸ್ / ಇನ್‌ಪಾರ್ಮೇಷನ್ / 1 /2015ರ ಅನ್ವಯ, ಚಾಮರಾಜನಗರ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಮೊ.ಸಂ: 3/2015 ಕಲಂ 13(1)(ಇ) ಪಿ.ಸಿ.ಕಾಯ್ದೆ, 1988ರ ರೀತ್ಯ ಶ್ರೀ. ಗೋಪಿಕೃಷ್ಣ, ಪೊಲೀಸ್ ನಿರೀಕ್ಷಕರು ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ. ತದನಂತರ, ಎದುರುದಾರರ ಕಛೇರಿಯು ಮೈಸೂರು ಜಿಲ್ಲಾ ವ್ಯಾಪ್ತಿಗೆ ಬರುವುದರಿಂದ, ಕೃತ್ಯ ನಡೆದ ಸ್ಥಳದ ಆಧಾರದ ಮೇಲೆ ನ್ಯಾಯಾಲಯದಿಂದ ಅನುಮತಿ ಪಡೆದು ಮಾನ್ಯ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತರವರ ನಡಾವಳಿ ಆದೇಶ ನಂ.ಕಲೋ/ಮೈವಿ/ಎಸ್‌ಪಿ/ಮೈಲೋಪಿಎಸ್ /ಮೊ.ಸಂ.03/2015, ದಿ: 05/03/2015ರ ರೀತ್ಯ ಶ್ರೀ. ಗೋಪಾಲಕೃಷ್ಣ, ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮೈಸೂರುರವರಿಗೆ ಎದುರುದಾರರ ವಿರುದ್ಧ ತನಿಖೆ ಕೈಗೊಳ್ಳಲು ಆದೇಶಿಸಿರುತ್ತಾರೆ. ಅದರಂತೆ ಪೊಲೀಸ್ ನಿರೀಕ್ಷಕರಾದ ಶ್ರೀ. ಗೋಪಾಲಕೃಷ್ಣರವರ ಠಾಣೆಯ ಗುನ್ನೆ ನಂ.03/2015ರಲ್ಲಿ ಕಲಂ 13(1)(ಇ) ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದು ಮುಂದುವರಿದ ತನಿಖೆಯನ್ನು ಶ್ರೀ. ಬಿ. ಪರಶುರಾಮ್, ಶ್ರೀ. ಬಾಲಕೃಷ್ಣ, ಶ್ರೀ. ಮಂಜುನಾಥ್ ಎಂ. ಮತ್ತು ಶ್ರೀ. ಅರುಣ್ ನಾಗೇಗೌಡ, ಪೊಲೀಸ್ ಉಪಾಧೀಕ್ಷಕರು ಕೈಗೊಂಡು ಅಂತಿಮವಾಗಿ ದೋಷಾರೋಪಣ ಪತ್ರದ ವರದಿಯನ್ನು ಸಲ್ಲಿಸಿರುತ್ತಾರೆ.

ತನಿಖಾಧಿಕಾರಿಯವರು ಅವರ ವರದಿಯಲ್ಲಿ ಎದುರುದಾರರ ಪರಿಶೀಲನಾ ಅವಧಿಯಾದ ದಿ: 14/01/1999 ರಿಂದ ದಿ: 26/02/2015ರವರೆಗೆ ಅವರ ಸರ್ಕಾರಿ

ಸಂ.ಕಂಪ್ಲೇಂಟ್/ಉಪಲೋಕ್/ಎಂ.ವೈ.ಎಸ್./2617/2022
ಪಿ.ಓ.ಎ.ಆರ್.ಇ–06

ಸೇವೆಯ ಅವಧಿಯಲ್ಲಿ ಬಲ್ಲಮೂಲಗಳ ಆದಾಯಕ್ಕಿಂತ ಹೆಚ್ಚಿನ ಆಸ್ತಿಗಳನ್ನು ಹೊಂದಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ.

ii(a) ತನಿಖಾಧಿಕಾರಿಯವರು ಪ್ರಕರಣದ ತನಿಖೆಯ ಸಮಯದಲ್ಲಿ ಎದುರುದಾರರು ಅವರ ಮತ್ತು ಅವರ ಪತ್ನಿಯ ಹೆಸರಿನಲ್ಲಿ ಈ ಕೆಳಕಂಡ ಸ್ಥಿರಾಸ್ತಿಗಳನ್ನು ಗಳಿಸಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ:–

| ಕ್ರ. ಸಂ. | ಆಸ್ತಿಯ ವಿವರ | ಯಾರ ಹೆಸರಿನಲ್ಲಿ ಖರೀದಿಸಲಾಗಿದೆ / ವರ್ಗಾಯಿಸಲಾಗಿದೆ. | ಅಂದಾಜು ಮೌಲ್ಯ ರೂ.ಗಳಲ್ಲಿ |
|---|---|---|---|
| 1 | ಮೈಸೂರು ನಗರ, ಮಂಡಿಮೊಹಲ್ಲಾ, ಬನ್ನಿ ಮಂಟಪ, ಸಿ–ಬಡಾವಣೆಯಲ್ಲಿನ ಮನೆ ನಂ.408ನ್ನು (40X68 ಅಡಿ ವಿಸ್ತೀರ್ಣವುಳ್ಳ ನಿವೇಶನ) ದಿ: 15/04/2010ರಂದು ಶ್ರೀ. ಮೊಹಮ್ಮದ್ ಜಫ್ರುಲ್ಲಾಖಾನ್‌ರವರಿಂದ ಖರೀದಿಸಿರುತ್ತಾರೆ. | ಎದುರುದಾರರಾದ ಶ್ರೀ. ಕರುಣಾಕರ ಮತ್ತು ಅವರ ಪತ್ನಿ ಶ್ರೀಮತಿ. ಸುಜಾತ ಕರುಣಾಕರರವರ ಹೆಸರಿನಲ್ಲಿ ಜಂಟಿಯಾಗಿ ಖರೀದಿಸಿರುತ್ತಾರೆ. | 36,00,000/– |
| 2 | ಮೈಸೂರು ನಗರದ ಬನ್ನಿಮಂಟಪ ಬಡಾವಣೆ ಸಿ–ಲೇಔಟ್ 2ನೇ ಕ್ರಾಸ್‌ನಲ್ಲಿರುವ ಮನೆ ನಂ.218 (30X41ಅಡಿ ವಿಸ್ತೀರ್ಣದಲ್ಲಿ ನಿರ್ಮಿಸಿರುವ ನೆಲ ಅಂತಸ್ತು ಮತ್ತು ಮೊದಲ ಮಹಡಿ ಮನೆ)ಯನ್ನು ದಿ: 09/05/2002ರಲ್ಲಿ ಶ್ರೀ. ರಿಹಾನ್ ಸೇಠ್‌ರವರಿಂದ ಖರೀದಿಸಿರುತ್ತಾರೆ. | ಎದುರುದಾರರಾದ ಶ್ರೀ. ಕರುಣಾಕರ ಮತ್ತು ಅವರ ಪತ್ನಿ ಶ್ರೀಮತಿ. ಸುಜಾತ ಕರುಣಾಕರರವರ ಹೆಸರಿನಲ್ಲಿ ಜಂಟಿಯಾಗಿ ಖರೀದಿಸಿರುತ್ತಾರೆ. | 15,00,000/– |
| 3 | ಮೈಸೂರು ನಗರದ ಬನ್ನಿಮಂಟಪ ಬಡಾವಣೆ 2ನೇ ಹಂತ, ಹುಡ್ಕೋದಲ್ಲಿರುವ ನಿವೇಶನ ಸಂ:47 (35X30ಅಡಿ ವಿಸ್ತೀರ್ಣದ ನಿವೇಶನ)ನ್ನು ದಿ: 11/02/2010 ರಂದು ಶ್ರೀ. ಮೊಹಮ್ಮದ್ ಜಫರ್ ಇಕ್ಬಾಲ್ ರವರಿಂದ ಖರೀದಿಸಿರುತ್ತಾರೆ. | ಎದುರುದಾರರಾದ ಶ್ರೀ. ಕರುಣಾಕರರವರ ಹೆಸರಿನಲ್ಲಿ ಖರೀದಿಸಿರುತ್ತಾರೆ. | 2,90,000/– |
| 4 | ಮೈಸೂರು ನಗರ ದಟ್ಟಗಳ್ಳಿ 3ನೇ ಹಂತದಲ್ಲಿರುವ ನಿವೇಶನ ಸ:1980 12X18 ಮೀ. ವಿಸ್ತೀರ್ಣದ | ಎದುರುದಾರರಾದ ಶ್ರೀ. ಕರುಣಾಕರರವರ ಹೆಸರಿನಲ್ಲಿ ಖರೀದಿಸಿರುತ್ತಾರೆ. | 2,00,000/– |

L.

| | | | |
|---|---|---|---|
| | ಜಾಗವನ್ನು ದಿ: 24/08/2000 ದಂದು ಶ್ರೀ.ನಿಂಗಪ್ಪ ಎಂಬುವವರಿಂದ ಖರೀದಿಸಿರುತ್ತಾರೆ. | | |
| 5 | ಮೈಸೂರು ತಾಲೂಕು ದಡದಹಳ್ಳಿ, ವಿಮಾನ ನಗರ, ನಿವೇಶನ ಸ:276, 15x24 ಮೀ. ವಿಸ್ತೀರ್ಣದ ನಿವೇಶನವನ್ನು ದಿ: 12/02/2015 ದಂದು ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಸಹಕಾರ ಭವನ, ಚಾಮರಾಜ ಜೋಡಿ ರಸ್ತೆ, ಮೈಸೂರುರವರಿಂದ ಖರೀದಿಸಿರುತ್ತಾರೆ. | ಎದುರುದಾರರಾದ ಶ್ರೀ. ಕರುಣಾಕರ ರವರ ಹೆಸರಿನಲ್ಲಿ ಖರೀದಿಸಿರುತ್ತಾರೆ. | 8,59,700/– |
| 6 | ಶ್ರೀರಂಗಪಟ್ಟಣ ತಾಲೂಕು, ಬೆಳಗೊಳ ಹೋಬಳಿ, ಬ್ರಹ್ಮಾಪುರ ಗ್ರಾಮದಲ್ಲಿರುವ ಸರ್ವೆ ನಂ: 156/1 ರಲ್ಲಿ 1 ಎಕರೆ 18 ಗುಂಟೆ ಜಮೀನನ್ನು ದಿ: 25/07/2013 ರಂದು ಶ್ರೀ. ರಾಮಕೃಷ್ಣ ಗುಪ್ತರವರಿಂದ ಖರೀದಿಸಿರುತ್ತಾರೆ. | ಎದುರುದಾರರಾದ ಶ್ರೀ. ಕರುಣಾಕರ ಮತ್ತು ಅವರ ಪತ್ನಿ ಶ್ರೀಮತಿ. ಸುಜಾತ ಕರುಣಾಕರರವರ ಹೆಸರಿನಲ್ಲಿ ಜಂಟಿಯಾಗಿ ಖರೀದಿಸಿರುತ್ತಾರೆ. | 75,00,000/– |
| 7 | ಮೈಸೂರು ನಗರ ಬನ್ನಿಮಂಟಪ ಬಡಾವಣೆ, ನೆಲ್ಸನ್ ಮಂಡೇಲಾ ರಸ್ತೆಯಲ್ಲಿರುವ ಡ್ಯಾಮ್‌ಡೆನ್ ಸಿಟಿ ಸ್ಕ್ವೇರ್ ಅಪಾರ್ಟ್‌ಮೆಂಟ್‌ನ ಫ್ಲಾಟ್ ನಂ.201 ವಿಸ್ತೀರ್ಣ 625 ಚ.ಅ. | ಎದುರುದಾರರಾದ ಶ್ರೀ. ಕರುಣಾಕರರವರ ಹೆಸರಿನಲ್ಲಿ ಖರೀದಿಸಿರುತ್ತಾರೆ. | 22,50,000/– |

ಈ ಮೇಲ್ಕಂಡ ಎಲ್ಲಾ ಸ್ಥಿರಾಸ್ತಿಗಳನ್ನು ಎದುರುದಾರರು ಅವರ ಮತ್ತು ಅವರ ಪತ್ನಿಯ ಹೆಸರಿನಲ್ಲಿ ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದಿರುವುದಿಲ್ಲ. ಎದುರುದಾರರು ನಿಯಮ 23(3) ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 1966, (ನಿಯಮ 24(3) ಪ್ರಸ್ತುತ ನಿಯಮ ಕ.ನಾ.ಸೇ. (ನಡತೆ) 2021)ನ್ನು ಉಲ್ಲಂಘಿಸಿ, ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

ಸಂ.ಕಂಪ್ಲೇಂಟ್/ಉಪಲೋಕ್/ಎಂ.ವೈ.ಎಸ್./2617/2022
ಪಿ.ಓ.ಎ.ಆರ್.ಇ-06

ii(b) ತನಿಖಾಧಿಕಾರಿಗಳು ಪ್ರಕರಣದ ತನಿಖೆಯ ಸಮಯದಲ್ಲಿ ಎದುರುದಾರರು ಅವರ ಪತ್ನಿಯ ಹೆಸರಿನಲ್ಲಿನ ಈ ಕೆಳಕಂಡ ಸ್ಥಿರಾಸ್ತಿಗಳನ್ನು ಮಾರಾಟ ಮಾಡಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ:-

| ಕ್ರ. ಸಂ. | ಆಸ್ತಿಗಳ ವಿವರ | ಯಾರು ಯಾರ ಹೆಸರಿಗೆ ಮಾರಾಟ ಮಾಡಿರುತ್ತಾರೆ. | ಮಾರಾಟದಿಂದ ಬಂದ ಮೊತ್ತ ರೂ.ಗಳಲ್ಲಿ |
|---|---|---|---|
| 1 | ಮೈಸೂರು ನಗರ ಹಂಚ್ಯಾ ಮತ್ತು ಸಾತಗಳ್ಳಿ 'ಎ' ವಲಯ, ನಜರಬಾದ್ ನಲ್ಲಿರುವ ನಿವೇಶನ ಸಂ: 1045, ವಿಸ್ತೀರ್ಣ 40X60 ಅಡಿ ಅಳತೆಯ ನಿವೇಶನವನ್ನು ಮಾರಾಟ ಮಾಡಿರುತ್ತಾರೆ. | ಎದುರುದಾರರ ಪತ್ನಿ ಶ್ರೀಮತಿ. ಸುಜಾತ ಕರುಣಾಕರ್ ರವರು ದಿ: 15/01/2013 ರಂದು ಶ್ರೀ. ಹಫೀಜ್ ಖಾನ್ ರವರಿಗೆ ಮಾರಾಟ ಮಾಡಿರುತ್ತಾರೆ. | 8,25,000/- |
| 2 | ಮೈಸೂರು ನಗರ 7ನೇ ಕ್ರಾಸ್, ವಿಜಯನಗರ 2ನೇ ಹಂತದಲ್ಲಿರುವ ನಿವೇಶನ ಸಂ: 4292, 7.50 X 9 ಮೀಟರ್ ವಿಸ್ತೀರ್ಣ ಅಳತೆಯ ನಿವೇಶನವನ್ನು ಮಾರಾಟ ಮಾಡಿರುತ್ತಾರೆ. | ಎದುರುದಾರರ ಪತ್ನಿ ಶ್ರೀಮತಿ. ಸುಜಾತ ಕರುಣಾಕರ್ ರವರು ದಿ: 06/03/2002 ರಂದು ಶ್ರೀ. ಅಶೋಕ್ ಕುಮಾರ್ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ. | 5,50,000/- |

ಈ ಮೇಲ್ಕಂಡ ಸ್ಥಿರಾಸ್ತಿಗಳನ್ನು ಎದುರುದಾರರು ಅವರ ಪತ್ನಿ ಶ್ರೀಮತಿ. ಸುಜಾತ ಕರುಣಾಕರ್‌ರವರು ಮಾರಾಟ ಮಾಡುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದಿರುವುದಿಲ್ಲ. ಎದುರುದಾರರು ನಿಯಮ 23(2) ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 1966, (ಪ್ರಸ್ತುತ ನಿಯಮ 24(3) ಕ.ನಾ.ಸೇ. (ನಡತೆ) 2021)ನ್ನು ಉಲ್ಲಂಘಿಸಿ, ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

iii) ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು ಮತ್ತು ತನಿಖಾಧಿಕಾರಿಯವರು ಕಲೆಹಾಕಿದ ದಾಖಲಾತಿಗಳಿಂದ ಎದುರುದಾರರು ಕಾನೂನು ಸಮ್ಮತ ಆದಾಯಕ್ಕಿಂತ ಅಸಮತೋಲನವಾಗಿ ಆಸ್ತಿಗಳನ್ನು ಅವರ ಮತ್ತು ಅವರ ಪತ್ನಿಯ ಹೆಸರಿನಲ್ಲಿ ಹೊಂದಿರುವುದಲ್ಲದೇ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನು ಪಡೆಯದೇ ಸ್ಥಿರಾಸ್ತಿಗಳನ್ನು ಖರೀದಿಸಿರುವುದು ಮತ್ತು ಮಾರಾಟ ಮಾಡಿರುವುದು ಕರ್ನಾಟಕ ನಾಗರಿಕ ಸೇವಾ ನಿಯಮಗಳನ್ನು ಪಾಲಿಸದೇ ಇರುವುದು ಕಂಡುಬಂದಿದ್ದರಿಂದ ಎದುರುದಾರರ ವಿರುದ್ಧ ದೋಷಾರೋಪಣ ಪತ್ರವನ್ನು ತನಿಖಾಧಿಕಾರಿಯವರು ತಯಾರಿಸಿ ಈ ಕಛೇರಿಗೆ ಸಲ್ಲಿಸಿರುತ್ತಾರೆ.

3. ಎದುರುದಾರರಿಗೆ ಈ ಕಛೇರಿಯಿಂದ ಕಳುಹಿಸಿದ ಪರಿವೀಕ್ಷಣಾ ಟಿಪ್ಪಣಿಯು ದಿ: 19/08/2022 ರಂದು ಜಾರಿಯಾಗಿದ್ದು, ಅವರು ದಿ: 29/08/2022 ರಂದು ಮತ್ತು ದಿ: 23/09/2022 ರಂದು ಪರಿವೀಕ್ಷಣಾ ಟಿಪ್ಪಣಿಗೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಯಲ್ಲಿ ಪರಿವೀಕ್ಷಣಾ ಟಿಪ್ಪಣಿಯ ಎಲ್ಲಾ ಅಂಶಗಳನ್ನು ಅಲ್ಲಗಳೆಯುತ್ತಾ ಅವರು 1999 ರಿಂದ ದಿ: 17/03/2006 ರವರೆಗೆ ಗುತ್ತಿಗೆ ಆಧಾರದ ಮೇಲೆ ಸಮುದಾಯ ಆರೋಗ್ಯ ಕೇಂದ್ರ, ತಲಕಾಡು ಮತ್ತು ಸರ್ಕಾರಿ ಆಸ್ಪತ್ರೆ ಟಿ. ನರಸೀಪುರದಲ್ಲಿ ಕರ್ತವ್ಯ ನಿರ್ವಹಿಸಿದ್ದಾಗಿ ಹಾಗೂ ದಿ: 18/03/2006 ರಿಂದ 2015 ರವರೆಗೆ ಸರ್ಕಾರಿ ಆಸ್ಪತ್ರೆ ಟಿ. ನರಸೀಪುರದಲ್ಲಿ ಖಾಯಂ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುವುದಾಗಿ ಆ ಬಗ್ಗೆ ದಾಖಲೆಗಳನ್ನು ಮತ್ತು ಅಭಿಯೋಜನಾ ಮಂಜೂರಾತಿ ನೀಡಲು ತಿರಸ್ಕರಿಸಿದ ಆದೇಶದ ಪ್ರತಿಯನ್ನು ಲಗತ್ತಿಸಿರುತ್ತಾರೆ. ಅವರ ಆಕ್ಷೇಪಣೆಯ ಪ್ಯಾರಾ–3ರಲ್ಲಿ ಅವರು ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದುದರಿಂದ ಆಸ್ತಿಗಳನ್ನು ಖರೀದಿಸುವಾಗ ಪೂರ್ವಾನುಮತಿ ಪಡೆಯುವ ಅವಶ್ಯಕತೆ ಇಲ್ಲವೆಂದು ತಿಳಿಸಿರುತ್ತಾರೆ.

| ಕ್ರ. ಸಂ. | ಆಸ್ತಿಯ ವಿವರ | ಯಾರ ಹೆಸರಿನಲ್ಲಿ ಖರೀದಿಸಲಾಗಿದೆ / ವರ್ಗಾಯಿಸಲಾಗಿದೆ. | ಅಂದಾಜು ಮೌಲ್ಯ ರೂ.ಗಳಲ್ಲಿ |
|---|---|---|---|
| 1 | ಮೈಸೂರು ನಗರ, ಮಂಡಿಮೊಹಲ್ಲಾ, ಬನ್ನಿ ಮಂಟಪ, ಸಿ–ಬಡಾವಣೆಯಲ್ಲಿನ ಮನೆ ನಂ.408ನ್ನು (40X68 ಅಡಿ ವಿಸ್ತೀರ್ಣವುಳ್ಳ ನಿವೇಶನ) ದಿ: 15/04/2010ರಂದು ಶ್ರೀ. ಮೊಹಮ್ಮದ್ ಜಫ್ರುಲ್ಲಾಖಾನ್‌ರವರಿಂದ ಖರೀದಿಸಿರುತ್ತಾರೆ. | ಎದುರುದಾರರಾದ ಶ್ರೀ. ಕರುಣಾಕರ ಮತ್ತು ಅವರ ಪತ್ನಿ ಶ್ರೀಮತಿ. ಸುಜಾತ ಕರುಣಾಕರರವರ ಹೆಸರಿನಲ್ಲಿ ಜಂಟಿಯಾಗಿ ಖರೀದಿಸಿರುತ್ತಾರೆ. | 36,00,000/- |

ಸಂ.ಕಂಪ್ಲೇಂಟ್/ಉಪಲೋಕ್/ಎಂ.ವೈ.ಎಸ್./2617/2022
ಪಿ.ಓ.ಎ.ಆರ್.ಇ–06

ಮೇಲ್ಕಂಡ ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ಎದುರುದಾರರು ಖಾಯಂ ನೌಕರರಾಗಿ ಸೇವೆ ಸಲ್ಲಿಸುತ್ತಿರುತ್ತಾರೆ. ಆದರೆ, ಅವರ ಆಕ್ಷೇಪಣೆಯ ಪ್ಯಾರಾ–4(ಎ) ರಲ್ಲಿ "ನನ್ನ ಪತ್ನಿ ಸುಜಾತ ಕರುಣಾಕರ್‌ರವರು ಬಿ.ಡಿ.ಎ. ದಂತ ವೈದ್ಯರಾಗಿ ನರ್ಸಿಂಗ್ ಹೋಂ ಹೊಂದಿದ್ದು, ಆದಾಯ ತೆರಿಗೆ ಪಾವತಿದಾರರಾಗಿರುತ್ತಾರೆ. ಅವರು ಮತ್ತು ನಾನು 2010–11ನೇ ಸಾಲಿನಲ್ಲಿ ವರಮಾನ ತೆರಿಗೆಯನ್ನು ಘೋಷಣೆ ಮಾಡಿಕೊಂಡಿರುತ್ತೇವೆಂದು ಮತ್ತು ವಾರ್ಷಿಕ ಆಸ್ತಿ ದಾಯಿತ್ವ ಪಟ್ಟಿಯನ್ನು ಸಕ್ಷಮ ಪ್ರಾಧಿಕಾರದವರಿಗೆ ಸಲ್ಲಿಸಿದ್ದು ಅವರು ಅದನ್ನು ಅಂಗೀಕರಿಸಿರುತ್ತಾರೆ. ಆ ಕಾರಣ, ಯಾವುದೇ ನಿಯಮಗಳನ್ನು ಉಲ್ಲಂಘಿಸಿ ಖರೀದಿಸಿರುವುದಿಲ್ಲವೆಂದು" ತಿಳಿಸಿರುತ್ತಾರೆ. ಎದುರುದಾರರು ದಿ: 15/04/2010 ರಂದು ಖಾಯಂ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದುದರಿಂದ ಮತ್ತು ಆಸ್ತಿಯನ್ನು ಅವರ ಮತ್ತು ಅವರ ಪತ್ನಿಯ ಹೆಸರಿನಲ್ಲಿ ಜಂಟಿಯಾಗಿ ಖರೀದಿಸಿರುವುದರಿಂದ ನಿಯಮ 23(2) ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 1966 ರನ್ವಯ ಆಸ್ತಿಗಳನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯಬೇಕಾಗಿರುತ್ತದೆ. ಆದರೆ, ಎದುರುದಾರರು ಅನುಮತಿ ಪಡೆದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸದೆ ಇರುವುದರಿಂದ, ಎದುರುದಾರರು ನೀಡಿದ ಸಮಜಾಯಿಷಿಯನ್ನು ಒಪ್ಪಲು ಬರುವುದಿಲ್ಲ.

| ಕ್ರ. ಸಂ. | ಆಸ್ತಿಯ ವಿವರ | ಯಾರ ಹೆಸರಿನಲ್ಲಿ ಖರೀದಿಸಲಾಗಿದೆ / ವರ್ಗಾಯಿಸಲಾಗಿದೆ. | ಅಂದಾಜು ಮೌಲ್ಯ ರೂ.ಗಳಲ್ಲಿ |
|---|---|---|---|
| 1 | ಮೈಸೂರು ನಗರದ ಬನ್ನಿಮಂಟಪ ಬಡಾವಣೆ 2ನೇ ಹಂತ, ಹುಡ್ಕೋದಲ್ಲಿರುವ ನಿವೇಶನ ಸಂ:47 (35X30ಅಡಿ ವಿಸ್ತೀರ್ಣದ ನಿವೇಶನ)ನ್ನು ದಿ: 11/02/2010 ರಂದು ಶ್ರೀ. ಮೊಹಮ್ಮದ್ ಜಫರ್ ಇಕ್ಬಾಲ್ ರವರಿಂದ ಖರೀದಿಸಿರುತ್ತಾರೆ. | ಎದುರುದಾರರಾದ ಶ್ರೀ. ಕರುಣಾಕರರವರ ಹೆಸರಿನಲ್ಲಿ ಖರೀದಿಸಿರುತ್ತಾರೆ. | 2,90,000/– |
| 2 | ಮೈಸೂರು ತಾಲೂಕು ದಡದಹಳ್ಳಿ, ವಿಮಾನ ನಗರ, ನಿವೇಶನ ಸ:276, 15X24 ಮೀ. ವಿಸ್ತೀರ್ಣದ | ಎದುರುದಾರರಾದ ಶ್ರೀ. ಕರುಣಾಕರ ರವರ ಹೆಸರಿನಲ್ಲಿ ಖರೀದಿಸಿರುತ್ತಾರೆ. | 8,59,700/– |

ಸಂ.ಕಂಪ್ಲೇಂಟ್/ಉಪಲೋಕ್/ಎಂ.ವೈ.ಎಸ್./2617/2022
ಪಿ.ಓ.ಎ.ಆರ್.ಇ–06

| | | | |
|---|---|---|---|
| | ನಿವೇಶನವನ್ನು ದಿ: 12/02/2015 ರಂದು ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಸಹಕಾರ ಭವನ, ಚಾಮರಾಜ ಜೋಡಿ ರಸ್ತೆ, ಮೈಸೂರುರವರಿಂದ ಖರೀದಿಸಿರುತ್ತಾರೆ. | | |
| 3 | ಶ್ರೀರಂಗಪಟ್ಟಣ ತಾಲೂಕು, ಬೆಳಗೊಳ ಹೋಬಳಿ, ಬ್ರಹ್ಮಾಪುರ ಗ್ರಾಮದಲ್ಲಿರುವ ಸರ್ವೆ ನಂ: 156/1 ರಲ್ಲಿ 1 ಎಕರೆ 18 ಗುಂಟೆ ಜಮೀನನ್ನು ದಿ: 25/07/2013 ರಂದು ಶ್ರೀ. ರಾಮಕೃಷ್ಣ ಗುಪ್ತರವರಿಂದ ಖರೀದಿಸಿರುತ್ತಾರೆ. | ಎದುರುದಾರರಾದ ಶ್ರೀ. ಕರುಣಾಕರ ಮತ್ತು ಅವರ ಪತ್ನಿ ಶ್ರೀಮತಿ. ಸುಜಾತ ಕರುಣಾಕರರವರ ಹೆಸರಿನಲ್ಲಿ ಜಂಟಿಯಾಗಿ ಖರೀದಿಸಿರುತ್ತಾರೆ. | 75,00,000/- |

ಈ ಮೇಲ್ಕಂಡ ಆಸ್ತಿಗಳ ಬಗ್ಗೆ ಅವರ ಆಕ್ಷೇಪಣೆಯ ಪ್ಯಾರಾ–4(ಸಿ). 4(ಡಿ), 4(ಇ)ರಲ್ಲಿ ಸಮಜಾಯಿಷಿಯನ್ನು ಸಲ್ಲಿಸಿದ್ದು, ಅವರ ಸಮಜಾಯಿಷಿಯಲ್ಲಿ ಕ್ರಮ ಸಂಖ್ಯೆ–1ರ ಆಸ್ತಿಯನ್ನು ಅವರ ಪತ್ನಿಯ ಆದಾಯದಿಂದ ಖರೀದಿಸಿರುವುದಾಗಿ, ಕ್ರಮ ಸಂಖ್ಯೆ–2ರ ಆಸ್ತಿಯನ್ನು ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತರವರಿಂದ ದಿ: 12/02/2015 ರಂದು ನಿವೇಶನವನ್ನು ನೋಂದಾಯಿಸಿಕೊಂಡಿರುವುದಾಗಿ ಮತ್ತು ಕ್ರಮ ಸಂಖ್ಯೆ–3ರ ಆಸ್ತಿಯನ್ನು ದಿ: 25/07/2013 ರಂದು ಖರೀದಿಸಿರುತ್ತೇನೆಂದು ಈ ಮೇಲ್ಕಂಡ ಎಲ್ಲಾ ಆಸ್ತಿಗಳನ್ನು ಆಯಾ ವಾರ್ಷಿಕ ಆಸ್ತಿ ಮತ್ತು ದಾಯಿತ್ವ ಪಟ್ಟಿಯಲ್ಲಿ ನಮೂದಿಸಿ ಸಕ್ಷಮ ಪ್ರಾಧಿಕಾರಕ್ಕೆ ವರದಿಮಾಡಿದ್ದು, ಸದರಿ ಆಸ್ತಿ ಮತ್ತು ದಾಯಿತ್ವ ಪಟ್ಟಿಯನ್ನು ಸಕ್ಷಮ ಪ್ರಾಧಿಕಾರದವರು ಅಂಗೀಕರಿಸಿಕೊಂಡಿರುತ್ತಾರೆ. ಆ ಕಾರಣ, ಯಾವುದೇ ನಿಯಮವನ್ನು ಉಲ್ಲಂಘಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದರೆ, ಆಸ್ತಿಗಳನ್ನು ಖರೀದಿಸುವ ಪೂರ್ವದಲ್ಲಿ ಅನುಮತಿ ಪಡೆದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸದೇ ಇರುವುದರಿಂದ ಎದುರುದಾರರು ನೀಡಿದ ಸಮಜಾಯಿಷಿಯನ್ನು ಒಪ್ಪಲು ಬರುವುದಿಲ್ಲ.

| ಕ್ರ. ಸಂ. | ಆಸ್ತಿಗಳ ವಿವರ | ಯಾರು ಯಾರ ಹೆಸರಿಗೆ ಮಾರಾಟ ಮಾಡಿರುತ್ತಾರೆ. | ಮಾರಾಟದಿಂದ ಬಂದ ಮೊತ್ತ ರೂ.ಗಳಲ್ಲಿ |
|---|---|---|---|
| 1 | ಮೈಸೂರು ನಗರ ಹಂಚ್ಯಾ ಮತ್ತು ಸಾತಗಳ್ಳಿ 'ಎ' ವಲಯ, ನಜರಬಾದ್ ನಲ್ಲಿರುವ ನಿವೇಶನ ಸಂ: 1045, ವಿಸ್ತೀರ್ಣ 40X60 ಅಡಿ ಅಳತೆಯ ನಿವೇಶನವನ್ನು ಮಾರಾಟ ಮಾಡಿರುತ್ತಾರೆ. | ಎದುರುದಾರರ ಪತ್ನಿ ಶ್ರೀಮತಿ. ಸುಜಾತ ಕರುಣಾಕರ್ ರವರು ದಿ: 15/01/2013 ರಂದು ಶ್ರೀ. ಹಫೀಜ್ ಖಾನ್ ರವರಿಗೆ ಮಾರಾಟ ಮಾಡಿರುತ್ತಾರೆ. | 8,25,000/- |

| | | | |
|---|---|---|---|
| 2 | ಮೈಸೂರು ನಗರ 7ನೇ ಕ್ರಾಸ್, ವಿಜಯನಗರ 2ನೇ ಹಂತದಲ್ಲಿರುವ ನಿವೇಶನ ಸಂ: 4292, 7.50 X 9 ಮೀಟರ್ ವಿಸ್ತೀರ್ಣ ಅಳತೆಯ ನಿವೇಶನವನ್ನು ಮಾರಾಟ ಮಾಡಿರುತ್ತಾರೆ. | ಎದುರುದಾರರ ಪತ್ನಿ ಶ್ರೀಮತಿ. ಸುಜಾತ ಕರುಣಾಕರ್ ರವರು ದಿ: 06/03/2002 ರಂದು ಶ್ರೀ. ಅಶೋಕ್ ಕುಮಾರ್ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ. | 5,50,000/– |

ಈ ಮೇಲ್ಕಂಡ ಆಸ್ತಿಗಳ ಬಗ್ಗೆ ಎದುರುದಾರರು ಅವರ ಆಕ್ಷೇಪಣೆಯ ಪ್ಯಾರಾ–5(ಎ) ಮತ್ತು 5(ಬಿ)ರಲ್ಲಿ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. ಅವರ ಸಮಜಾಯಿಷಿಯಲ್ಲಿ ಅವರ ಪತ್ನಿ ಅವರ ಸ್ವಂತ ಆದಾಯದ ಮೂಲದಿಂದ ನಿವೇಶನವನ್ನು 2009ನೇ ಇಸವಿಯಲ್ಲಿ ಖರೀದಿಸಿದ್ದು ಆಕೆ ದಿ: 15/01/2013 ರಲ್ಲಿ ನಿವೇಶನವನ್ನು ಮಾರಾಟಮಾಡಿದ್ದು, ಆ ಮಾರಾಟಮಾಡಿ ಬಂದ ವರಮಾನವನ್ನು ತೆರಿಗೆ ಇಲಾಖೆಗೆ ಆರ್ಥಿಕ ವರ್ಷದಲ್ಲಿ ಘೋಷಣೆ ಮಾಡಿರುತ್ತಾರೆ. ಹಾಗಾಗಿ ಯಾವುದೇ ನಿಯಮಗಳನ್ನು ಉಲ್ಲಂಘನೆ ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದರೆ, ಕ.ನಾ.ಸೇ. (ನಡತೆ) ನಿಯಮ 1966ರಲ್ಲಿ ಸರ್ಕಾರಿ ನೌಕರನ ಕುಟುಂಬವೆಂಬ ವ್ಯಾಪ್ತಿಯಲ್ಲಿ ಸರ್ಕಾರಿ ನೌಕರನ ಪತ್ನಿ ಕೂಡ ಕುಟುಂಬದ ವ್ಯಾಪ್ತಿಯಲ್ಲಿ ಬರುವುದರಿಂದ, ಆಸ್ತಿ ಮಾರಾಟ ಮಾಡುವ ಪೂರ್ವದಲ್ಲಿ ಅನುಮತಿ ಪಡೆಯಬೇಕಾಗಿರುತ್ತದೆ ಮತ್ತು ಮಾರಾಟ ಮಾಡಿದ ಬಗ್ಗೆ ಮಾಹಿತಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ವರದಿ ಮಾಡಬೇಕಾಗಿರುತ್ತದೆ. ಆ ಕಾರಣದಿಂದ, ಎದುರುದಾರರು ನೀಡಿದ ಸಮಜಾಯಿಷಿಯನ್ನು ಒಪ್ಪಲು ಬರುವುದಿಲ್ಲ. ಕ್ರಮ ಸಂಖ್ಯೆ–2ರ ಆಸ್ತಿಯನ್ನು ದಿ: 06/03/2002 ರಂದು ಮಾರಾಟಮಾಡಿರುತ್ತಾರೆ. ಆ ಸಮಯದಲ್ಲಿ ಎದುರುದಾರರು ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದುದರಿಂದ, ಕ.ನಾ.ಸೇ. (ನಡತೆ) ನಿಯಮಗಳು 1966 ಅನ್ವಯಿಸುವುದಿಲ್ಲ ಮತ್ತು ಯಾವುದೇ ನಿಯಮಗಳನ್ನು ಉಲ್ಲಂಘನೆ ಮಾಡಿರುವುದಿಲ್ಲವೆಂದು ತಿಳಿಸಿರುವ ಸಮಜಾಯಿಷಿಯನ್ನು ಒಪ್ಪಬಹುದಾಗಿದೆ. ಎದುರುದಾರರು ಅವರ ಸಮಜಾಯಿಷಿಯಲ್ಲಿ ಪ್ರಕರಣವು ದಾಖಲಾಗಿ ಏಳು ವರ್ಷ ಕಳೆದಿರುವುದರಿಂದ ಹಾಗೂ ಅನಾರೋಗ್ಯದಿಂದ ಬಳಲುತ್ತಿರುವುದರಿಂದ ಮತ್ತು ಈ ಸಂಸ್ಥೆಗೆ ಇಲಾಖಾ ವಿಚಾರಣೆ ಮಾಡಲು ಯಾವುದೇ ಅಧಿಕಾರವಿರುವುದಿಲ್ಲವೆಂದು ಕರ್ನಾಟಕ ಉಚ್ಛ ನ್ಯಾಯಾಲಯದ ರಿಟ್ ಪಿಟಿಷನ್ ನಂ.19386/2016ರ ಆದೇಶದ ಪ್ರತಿಯನ್ನು ಸಲ್ಲಿಸುತ್ತಾ ಪ್ರಕರಣವನ್ನು ಮುಕ್ತಾಯಗೊಳಿಸಲು ಕೋರಿರುತ್ತಾರೆ.

3. ಎದುರುದಾರರು ಅವರ ಸಮಜಾಯಿಷಿಯಲ್ಲಿ ಪರಿವೀಕ್ಷಣಾ ಟಿಪ್ಪಣಿಯ ii(a) ಕ್ರಮ ಸಂಖ್ಯೆ–1, 3, 5 ಮತ್ತು 6ರ ಬಗ್ಗೆ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಮತ್ತು ii(b) ಕ್ರಮ ಸಂಖ್ಯೆ–1ರ ಆಸ್ತಿಯನ್ನು ಮಾರಾಟ ಮಾಡುವ ಪೂರ್ವದಲ್ಲಿ ಮತ್ತು ಅವರ ಪತ್ನಿ ಮಾರಾಟಮಾಡಿದ ನಂತರ ಎದುರುದಾರರು ಅವರ ಸಕ್ಷಮ ಪ್ರಾಧಿಕಾರಿಗಳಿಂದ ಅನುಮತಿ ಪಡೆದ ಬಗ್ಗೆ ಮತ್ತು ನಂತರ ಮಾರಾಟ ಮಾಡಿದ ಮಾಹಿತಿ ನೀಡಿದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸದೇ ಇರುವುದರಿಂದ, ಎದುರುದಾರರು ಕ.ನಾ.ಸೇ. (ನಡತೆ) ನಿಯಮ 1966ರ ನಿಯಮ 23(2), 23(3)ರ ನಿಯಮಗಳನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಎದುರುದಾರರು ಸಲ್ಲಿಸಿದ ಆಕ್ಷೇಪಣೆಯ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸುವ ಬಗ್ಗೆ ಯಾವುದೇ ಸಕಾರಣಗಳು ಕಂಡುಬಂದಿರುವುದಿಲ್ಲ.

4. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳು ಹಾಗೂ ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ ಎದುರುದಾರರ ವಿರುದ್ಧ ನಡಾವಳಿಯನ್ನು ಕೈಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣಗಳನ್ನು ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5. ಆದುದರಿಂದ, **ಶ್ರೀ. ಕರುಣಾಕರ್ ಬಿನ್ ಲೇಟ್ ನಾಗರಾಜೇಗೌಡ,** ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಟಿ.ನರಸೀಪುರ, ಮೈಸೂರು ಜಿಲ್ಲೆ (ನಿವೃತ್ತಿ ದಿ: 30/06/2028)ರವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ ವಿಚಾರಣೆಯನ್ನು ಮಾಡಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ)ರಡಿ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರಡಿ ಪ್ರದತ್ತವಾದ ಅಧಿಕಾರದಡಿ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

(1) ಎದುರುದಾರರ ವಿರುದ್ಧ ಅಸಮತೋಲನ ಆಸ್ತಿಯನ್ನು ಹೊಂದಲು ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಮತ್ತು ನಂತರದಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ತಿಳಿಸದೆ ಇರುವ ವಿಚಾರವಾಗಿ ಮಾತ್ರ ಇಲಾಖಾ ವಿಚಾರಣೆ ಮಾಡಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957ರ ನಿಯಮ 14(ಎ)ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿದೆ ಹಾಗೂ

ಸಂ.ಕಂಪ್ಲೇಂಟ್/ಉಪಲೋಕ್/ಎಂ.ವೈ.ಎಸ್./2617/2022
ಪಿ.ಓ.ಎ.ಆರ್.ಇ–06

(2) ಭಾರತದ ಸರ್ವೋಚ್ಚ ನ್ಯಾಯಾಲಯದ ತೀರ್ಪು AIR 1978 of Hon'ble Supreme Court, Page-3047, State of Karnataka –Vs- Kempaiah, ಈ ಕೇಸಿನಲ್ಲಿ ಹೇಳಿರುವಂತೆ ಎದುರುದಾರರು ಕಾನೂನು ಸಮ್ಮತದ ಆದಾಯಕ್ಕಿಂತ ಅಸಮತೋಲನ ಆದಾಯವನ್ನು ಹೇಗೆ ಹೊಂದಿದರು ಎಂಬುದರ ಬಗ್ಗೆ ವಿಚಾರಣೆ ನಡೆಸಲು ಅವಕಾಶವಿರುವುದಿಲ್ಲ. ಆದುದರಿಂದ, ಸದರಿ ವಿಷಯಕ್ಕೆ ಸಂಬಂಧಿಸಿದ ವಿಚಾರಣೆಯನ್ನು ಸರ್ಕಾರವೇ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957ರಡಿಯಲ್ಲಿ ವಿಚಾರಣೆ ಮಾಡಲು ಕ್ರಮ ಕೈಗೊಳ್ಳಬಹುದಾಗಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

28/11/22

(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)
ಉಪಲೋಕಾಯುಕ್ತರು–01,
ಕರ್ನಾಟಕ ರಾಜ್ಯ, ಬೆಂಗಳೂರು.